**ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಂ ।**
**ಪಾತ್ರತ್ವಾದ್ಧನಮಾಪ್ನೋತಿ ಧನಾದ್ಧರ್ಮಂ ತತಃ ಸುಖಂ ॥**

ವಿದ್ಯೆಯನ್ನು ಚೆನ್ನಾಗಿ ಶ್ರದ್ಧೆಯಿಂದ ಕಲಿತರೆ, ವಿನಯವು ಲಭಿಸುತ್ತದೆ. ವಿನಯವನ್ನು ಸದುಪಯೋಗ ಮಾಡಿಕೊಂಡಾಗ ಯೋಗ್ಯತೆಯೂ, ಯೋಗ್ಯತೆಯಿಂದ ಸ್ವಾಭಾವಿಕವಾಗಿಯೇ ಧನವೂ ಲಭಿಸುತ್ತದೆ. ಹಾಗೆ ಲಭಿಸಿದ ಧನದಿಂದ ದಾನ, ಧರ್ಮಗಳನ್ನು ಮಾಡಿಕೊಂಡು ಬದುಕತೊಡಗಿದರೆ, ವ್ಯಕ್ತಿಯ ಜೀವನ ಸುಖಮಯವಾಗುತ್ತದೆ.

ಯಾವಾಗ ವಸ್ತುವಿನ ಬೇಡಿಕೆ ಹೆಚ್ಚಾಗುತ್ತದೆಯೋ, ಆಗ ವಸ್ತುವಿನ ಬೆಲೆಯೂ ಹೆಚ್ಚಾಗುತ್ತದೆ. ಹಾಗೆಯೇ, ಇಂದು ಅಧಿಕ ಹಣ ತರುವ ಕಂಪ್ಯೂಟರ್, ಇಂಜಿನಿಯರಿಂಗ್, ಮೆಡಿಕಲ್ ಕ್ಷೇತ್ರಗಳಿಗೆ ಬಹಳ ಬೇಡಿಕೆ ಇದೆ. ಆದ್ದರಿಂದಲೇ ಮಕ್ಕಳ ತಂದೆತಾಯಿಗಳು ಎಷ್ಟೇ ಹಣ ಖರ್ಚಾದರೂ ಸರಿ, ತಮ್ಮ ಮಕ್ಕಳಿಗೆ ಈ ಕ್ಷೇತ್ರದಲ್ಲಿ ಉನ್ನತ ಶಿಕ್ಷಣವನ್ನು ಕೊಡಿಸಲೇ ಬೇಕೆಂದು ಚಿಂತಿಸುತ್ತಾರೆ. ಈ ಕ್ಷೇತ್ರದಲ್ಲಿ ಶಿಕ್ಷಣ ಪಡೆದು ಹೊರ ಬಂದ ತಂತ್ರಜ್ಞರು, ವೈದ್ಯರು ತಮ್ಮ ಬಂಡವಾಳವನ್ನು ಚಕ್ರಬಡ್ಡಿ ಸಮೇತ ಈ ಸಮಾಜದಿಂದ ಪಡೆಯಲು ಕಾತರರಾಗಿರುತ್ತಾರೆ. ಈ ಕಾರಣದಿಂದಾಗಿ ಭಾರತದೇಶ ಲಂಚ ಸ್ವೀಕರಿಸುವ ದೇಶಗಳ ಪಟ್ಟಿಯಲ್ಲಿ ಮೊದಲನೇ ಸ್ಥಾನಕ್ಕಾಗಿ ಕಸರತ್ತು ಮಾಡುತ್ತಿದೆ! ಎಲ್ಲಾ ಕ್ಷೇತ್ರಗಳೂ ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿವೆ. ರಾಜಕೀಯ ಅಸಹನೀಯವಾಗಿದೆ. ಅದಕ್ಕೆ ಪರಿಹಾರವನ್ನು ಹುಡುಕಲೇಬೇಕಾಗಿದೆ. ಪರಿಹಾರವೂ ಸರಳ. ವಿದ್ಯಾರ್ಥಿಯಲ್ಲಿ ಹುದುಗಿರುವ ಸುಪ್ತ ಚೇತನವನ್ನು ಜಾಗೃತಗೊಳಿಸಬಲ್ಲ ಶಿಕ್ಷಣವನ್ನು ಸೂಕ್ತ ವಾತಾವರಣದೊಂದಿಗೆ ಸಂಸ್ಕೃತಿಯನ್ನು ನೀಡುವ ಚಟುವಟಿಕೆಗಳ ಮೂಲಕ ನೀಡಬೇಕು. ನೈತಿಕತೆ, ಸ್ವತಂತ್ರವಾಗಿ ಆಲೋಚಿಸುವ ಸಾಮರ್ಥ್ಯ, ಎಲ್ಲರೊಂದಿಗೆ ಸಾಮರಸ್ಯದಿಂದ ಬಾಳುವ ಕಲೆ ಹಾಗೂ ಸೇವಾಭಾವನೆಯನ್ನು ಪಠ್ಯಕ್ರಮದಲ್ಲೇ ಅಳವಡಿಸಬೇಕು. ಇಂತಹ ಪ್ರಯೋಗವನ್ನು ಒಳಗೊಂಡಿರುವ ಮೂರು ಗುರುಕುಲಗಳು ನಮ್ಮ ಕರ್ನಾಟಕದಲ್ಲಿ ಇವೆ. ಇದೇ ರೀತಿ ಇನ್ನೂ ಹಲವು ಗುರುಕುಲಗಳಾಗಿ ಮೆಕಾಲೆ ಶಿಕ್ಷಣವನ್ನು ಸಮಾಜವೇ ಕಿತ್ತು ಬಿಸಾಡುವಂತೆ ಆಗಬೇಕು. ಇದು ಕಷ್ಟದ ಕೆಲಸ ಎಂದು ನೀವು ಹೇಳಬಹುದು. ಆದರೆ, ಕಂಪ್ಯೂಟರ್‌ಗಳಂತಹ ತಂತ್ರಜ್ಞಾನವನ್ನು ಆವಿಷ್ಕರಿಸಿದ ಮನುಷ್ಯನಿಗೆ, ಈ ಕೆಲಸವೇನೂ ದೊಡ್ಡದಲ್ಲ. ಇದೇ ರೀತಿ ಭಾರತದಲ್ಲೆಲ್ಲಾ ಗುರುಕುಲಗಳ ಸ್ಥಾಪನೆಯಾದರೆ, ನಮ್ಮ ಭಾರತಮಾತೆ ಪುನಃ ಜಗಜ್ಜನನಿಯಾಗುವುದರೊಂದಿಗೆ, ಜಗತ್ತಿಗೆ ಬೆಳಕನ್ನು ನೀಡುವುದರಲ್ಲೂ ಸಂಶಯವಿಲ್ಲ. ಹೀಗಾಗಿ ನೀವು ಚಿಂತಿಸಿ: ನಾವು ಅಸಂಸ್ಕೃತರಾಗಬೇಕೆ ಅಥವಾ ಸುಸಂಸ್ಕೃತರಾಗಬೇಕೆ? ನಮಗೆ ಮೆಕಾಲೆ ಶಿಕ್ಷಣ ಬೇಕೆ ಅಥವಾ ನಮ್ಮ ಹಿಂದೂ ಪರಂಪರೆಯ ಶ್ರೇಷ್ಠ, ಉದಾತ್ತ ಶಿಕ್ಷಣ ಬೇಕೇ?

# ? ಕೇಳಿ ತಿಳಿಯಿರಿ ☆

(ಯುವಕರ ಪ್ರಶ್ನೆಗಳಿಗೆ ರಾಷ್ಟ್ರಪತಿಗಳು ನೀಡಿದ ಉತ್ತರ)

(ಭಾರತದ ರಾಷ್ಟ್ರಪತಿಗಳಾದ ಡಾ. ಅಬ್ದುಲ್ ಕಲಾಂ ಅವರು ಜನವರಿ ೧೨ರಂದು ಪೋರ್‌ಬಂದರಿನ ರಾಮಕೃಷ್ಣ ಮಿಷನ್ ಏರ್ಪಡಿಸಿದ್ದ ರಾಷ್ಟ್ರೀಯ ಯುವ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ, ಅವರು "ಸ್ವಾಮಿ ವಿವೇಕಾನಂದರ ಸಂದೇಶಗಳು ಆಧುನಿಕ ಯುವಕರಿಗೆ ತುಂಬ ಆವಶ್ಯಕವಾಗಿವೆ; ಅವು ಅವರನ್ನು ಸ್ಫೂರ್ತಿಭರಿತರನ್ನಾಗಿ ಮಾಡುತ್ತವೆ" ಎಂದು ಹೇಳಿದರು. ಸುಮಾರು ೫,೦೦೦ ಯುವಕರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಯುವಕರ ಪ್ರಶ್ನೆಗಳಿಗೆ ಮಾನ್ಯ ರಾಷ್ಟ್ರಪತಿಗಳು ನೀಡಿದ ಉತ್ತರಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ)

? ಈ ಜಗತ್ತಿನಲ್ಲೇ ಅತ್ಯುತ್ತಮ ರಾಷ್ಟ್ರವನ್ನಾಗಿ ಮಾಡಲು ನಾವು ಭಾರತಕ್ಕಾಗಿ ಏನು ಮಾಡಬಲ್ಲೆವು? ಇದರ ಬಗ್ಗೆ ನೀವು ನಮ್ಮಿಂದ ಏನು ಬಯಸುತ್ತೀರಿ?

☆ **೧. ನಿನ್ನ ಅಧ್ಯಯನದಲ್ಲಿ ಅತ್ಯುತ್ತಮನಾಗು. ಗುರಿಯನ್ನು ನಿರ್ಧರಿಸಿಕೊಂಡು ಅದನ್ನು ಸಾಧಿಸಲು ಶ್ರಮವಹಿಸು.**

**೨. ಐದು ಜನ ಅನಕ್ಷರಸ್ಥರಿಗೆ ಓದು ಬರಹ ಹೇಳಿಕೊಡು.**

**೩. ಐದು ಮರಗಳನ್ನು ನೆಟ್ಟು, ಅವುಗಳಿಗೆ ನೀರು ಹಾಕಿ ಪೋಷಿಸು.**

**೪. ಶಕ್ತಿಯನ್ನು ಸಂರಕ್ಷಿಸು, ಅಪವ್ಯಯವಾಗದಂತೆ ನೋಡಿಕೋ.**

**೫. ಇತರ ವಿದ್ಯಾರ್ಥಿಗಳೊಂದಿಗೆ ಒಗ್ಗೂಡಿ ನಿಮ್ಮ ಪರಿಸರವನ್ನು ಶುಭ್ರವಾಗಿಡಲು ಒಂದು ಕಾರ್ಯಕ್ರಮ ಹಮ್ಮಿಕೋ.**

? ನಮ್ಮ ದೇಶದ ಈಗಿನ ಶಿಕ್ಷಣ ಪದ್ಧತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

★ ಈಗಿನ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಾಥಮಿಕ ತರಗತಿಗಳಲ್ಲಿರುವ ಒತ್ತಡವನ್ನು ಕಡಿಮೆ ಮಾಡುವ ಆವಶ್ಯಕತೆಯಿದೆ. ಮಕ್ಕಳು ಸೃಜನಾತ್ಮಕರಾಗುವಂತೆ ಅವರನ್ನು ರೂಪಿಸಬೇಕು. ಮಕ್ಕಳು ಸ್ವತಃ ಮಾಡುವ ಪ್ರಯೋಗಗಳಿಂದ, ಚಟುವಟಿಕೆಗಳಿಂದ ಕಲಿಯಬೇಕು; ಉರು ಹೊಡೆಯುವುದರಿಂದಲ್ಲ. ಮಕ್ಕಳು ಆಲೋಚಿಸಿ, ಕೆಲಸವನ್ನು ಮಾಡುವಂತೆ ಪ್ರೇರೇಪಿಸುವುದು ಶಿಕ್ಷಕರ ಕರ್ತವ್ಯ.

? ಭಾರತವನ್ನು ಅಭಿವೃದ್ಧಿಶೀಲ ರಾಷ್ಟ್ರವನ್ನಾಗಿಸುವಲ್ಲಿ ಇರುವ ಅತ್ಯಂತ ದೊಡ್ಡ ತೊಂದರೆ ನಮ್ಮ ಜನಸಂಖ್ಯೆ. ಎಲ್ಲ ರಾಜ್ಯಗಳಲ್ಲೂ 'ಎರಡೇ ಮಕ್ಕಳು' ಎನ್ನುವ ನಿಯಮವನ್ನು ಜಾರಿಗೊಳಿಸಿ ಜನಸಂಖ್ಯೆಯನ್ನು ನಿಯಂತ್ರಿಸಬಹುದಲ್ಲ. ಹೀಗೇಕೆ ಮಾಡಿಲ್ಲ?

★ ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ನೀಡುವುದೇ ಇದಕ್ಕೆ ಪರಿಹಾರ. ಯಾವ ಯಾವ ರಾಜ್ಯಗಳಲ್ಲಿ ಹೆಣ್ಣು ಮಕ್ಕಳು ವಿದ್ಯಾವಂತೆಯರಾಗಿದ್ದಾರೋ ಅಲ್ಲೆಲ್ಲ ಜನಸಂಖ್ಯೆಯಲ್ಲಿ ಗಮನಾರ್ಹ ನಿಯಂತ್ರಣ ಕಂಡುಬಂದಿದೆ. ನಿಮ್ಮ ಪ್ರದೇಶದ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಕಾರ್ಯಕ್ರಮವನ್ನು ನಿಮ್ಮ ಶಾಲೆಯು ಪ್ರಾರಂಭಿಸಬಹುದು.

? ವೇದಗಳು ಜಗತ್ತಿನಲ್ಲೇ ಅತ್ಯಂತ ಪುರಾತನವೂ ಪರಿಪೂರ್ಣವೂ ಆದ ಶಾಸ್ತ್ರವೆನ್ನುತ್ತಾರೆ. ಅಂತರಿಕ್ಷ, ವೈದ್ಯಶಾಸ್ತ್ರ, ಶಸ್ತ್ರಚಿಕಿತ್ಸೆ, ವಿಜ್ಞಾನ, ತಂತ್ರಜ್ಞಾನ, ಯೋಗ, ತಂತ್ರ-ಮಂತ್ರಗಳ ಬಗ್ಗೆ ಅನೇಕ ಮಾಹಿತಿ ವೇದಗಳಲ್ಲಿ ಇದೆ. ಹಿಂದಿನ ಕಾಲದಲ್ಲಿ ತಕ್ಷಶಿಲಾ ಮತ್ತು ನಲಂದಾಗಳಲ್ಲಿ ಇದ್ದ ನಮ್ಮ ವಿಶ್ವವಿದ್ಯಾನಿಲಯಗಳಿಗೆ ಜಗತ್ತಿನ ಎಲ್ಲೆಡೆಯಿಂದ ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಬರುತ್ತಿದ್ದರು. ಇಂದಿನ ವಿದ್ಯಾರ್ಥಿಗಳು ಓದಲು ಹೊರದೇಶಗಳಿಗೆ ಹೋಗುತ್ತಾರೆ. ಇದು ಯಾವಾಗ ಬದಲಾಗುತ್ತದೆ? ಇತಿಹಾಸ ಪುನರಾವರ್ತಿಸುತ್ತದೆ ಎಂದು ಹೇಳುತ್ತಾರೆ. ಯಾವಾಗ ಇದು ವಾಸ್ತವವಾಗುವುದು? ವೇದಗಳನ್ನು ಬಳಸಿಕೊಂಡು ನಾವು ನಮ್ಮ ದೇಶವನ್ನು ಪ್ರಬಲ ಶಕ್ತಿಯಾಗಿಸುವುದು ಹೇಗೆ?

★ ನನ್ನ ನೆನಪಿನಲ್ಲಿ ಹಸಿರಾಗಿರುವ ಮತ್ತೊಂದು ಘಟನೆಯನ್ನು ಸ್ಮರಿಸಿಕೊಳ್ಳುತ್ತಿದ್ದೇನೆ. ಕೆನಡಾ ದೇಶದ ಒಬ್ಬ ವಿಜ್ಞಾನಿಯಿಂದ ನನಗೊಂದು ಈ-ಮೇಲ್ ಬಂದಿತ್ತು. ಅದನ್ನು ಕಳಿಸಿದವರು ವಾಟರ್‌ಲೂ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಪ್ರೊ. ಎಂ. ವಿದ್ಯಾಸಾಗರ್. ಸ್ವಲ್ಪ ಕಾಲ ಕೆಲಸದಿಂದ ಬಿಡುಗಡೆ ಪಡೆದುಕೊಂಡು ನನ್ನೊಂದಿಗೆ DRDLನಲ್ಲಿ ಕೆಲಸ ಮಾಡಬೇಕೆಂದು ಆತ ಬಯಸಿದ್ದ. ನಾವು RCI ಪ್ರಾರಂಭಿಸಿದಾಗ ಆತ ಬಂದು ನಮ್ಮನ್ನು ಸೇರಿದ. ಆತ non-linear control system ಗಳಲ್ಲಿ ಅಪಾರವಾದ ಜ್ಞಾನವನ್ನು ಪಡೆದಿದ್ದ. ಹನ್ನೆರಡು ತಿಂಗಳ ಕಾಲ ನಮ್ಮೊಂದಿಗೆ ಕೆಲಸ ಮಾಡಿದ ನಂತರ ಹಿಂದಿರುಗುವಾಗ, ಈ ದೇಶಕ್ಕೇ ಮರಳಿ ಬಂದು ಸೇವೆ ಸಲ್ಲಿಸಲು ಬಯಸುವ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದ. ಆತ ಹತ್ತು ವರ್ಷಗಳ ಕಾಲ DRDLನಲ್ಲಿ ಕೆಲಸ ಮಾಡಿ ಬೆಂಗಳೂರಿನಲ್ಲಿ CAIR-Centre for Artificial Intelligence and Robotics ವಿಭಾಗವನ್ನು ಪ್ರಾರಂಭಿಸಿದ. ಈಗ ಹೈದರಾಬಾದಿನ TCSನಲ್ಲಿ ಸೇವೆ ಸಲ್ಲಿಸುತ್ತಿದ್ದು bio-informaticsನಲ್ಲಿ ಅತ್ಯದ್ಭುತ ಸಾಧನೆ ಮಾಡಿದ್ದಾನೆ. ಅಷ್ಟೇ ಅಲ್ಲದೆ, ಇತ್ತೀಚೆಗೆ ಪ್ರವಾಸಿ ದಿವಸದಂದು ಅನಿವಾಸಿ ಭಾರತೀಯರನ್ನು ಉದ್ದೇಶಿಸಿ ನಾನು ಮಾತನಾಡಿದಾಗ ಅನೇಕ ಭಾರತೀಯರು ಇಲ್ಲಿಯೇ ಬಂದು ನೆಲೆಸಲು ಬಯಸುತ್ತಿರುವರೆಂದು ತಿಳಿಸಿದರು.

? ನಮ್ಮ ದೇಶದಲ್ಲಿ ಉನ್ನತ ಶಿಕ್ಷಣ ಪಡೆಯಲು ನಾವು ಡೊನೇಷನ್ ಏಕೆ ಕೊಡಬೇಕು? ಬಡ ವಿದ್ಯಾರ್ಥಿಗಳಿಗೆ ವಿದ್ಯೆಯೇ ದೊರೆಯುತ್ತಿಲ್ಲವಲ್ಲ! ಇದಕ್ಕೆ ಪರಿಹಾರವಿದೆಯೇ?

★ ಈಗ ತಂತ್ರಜ್ಞಾನದ ಕ್ಷೇತ್ರದಲ್ಲಿ ಬೇಕಾದಷ್ಟು ಸೀಟುಗಳಿವೆ. ಬ್ಯಾಂಕುಗಳೂ ವಿದ್ಯಾರ್ಥಿಗಳಿಗೆ ಸಾಲ ನೀಡುತ್ತಿವೆ. ಇದೇ ರೀತಿ ವೈದ್ಯಕೀಯ ಕ್ಷೇತ್ರದಲ್ಲೂ ಸೀಟುಗಳನ್ನು ಹೆಚ್ಚಿಸುವ ಕೆಲಸ ಆಗಬೇಕಿದೆ.

? ವಿಜ್ಞಾನವು ಆಸಕ್ತಿಯನ್ನು ಕೆರಳಿಸುವಂತಹ ವಿಷಯವಾದರೂ, ನಮ್ಮ ಪಠ್ಯಪುಸ್ತಕಗಳನ್ನು ಓದಿದರೆ ಏನೂ ಅರ್ಥವಾಗುವುದಿಲ್ಲ. ಅವನ್ನು ಅಷ್ಟು ನೀರಸವಾಗಿ ಬರೆದಿರುತ್ತಾರೆ, ಓದಿದಾಗ ಬೇಸರ ಹುಟ್ಟುತ್ತದೆ. ಇದರ ಬಗ್ಗೆ ಸರ್ಕಾರ ಅಥವಾ ಶಿಕ್ಷಣ ಇಲಾಖೆಯು ಏನಾದರೂ ಮಾಡುತ್ತಿರುವುದೇ?

★ ಒಂದು ವಿಷಯವನ್ನು ಆಕರ್ಷಕವಾಗಿ ಹೇಳುವುದು ಅಥವಾ ತಿಳಿಸುವುದು ಶಿಕ್ಷಕನಲ್ಲಿರಬೇಕಾದ ಕಲೆ. ನನ್ನ ಅಧ್ಯಾಪಕರಾಗಿದ್ದ ಶ್ರೀ ಶಿವ ಸುಬ್ರಹ್ಮಣ್ಯ ಅಯ್ಯರ್‌ರವರು ಹಕ್ಕಿಗಳು ಹೇಗೆ ಹಾರುತ್ತವೆ ಎಂಬುದನ್ನು ಅದೆಷ್ಟು ಸೊಗಸಾಗಿ ವಿವರಿಸಿದ್ದರು. ಅದನ್ನು ನಿಮಗೆ ವಿವರಿಸಲು ಬಯಸುತ್ತೇನೆ.

? ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರಿಗೂ, ಕ್ಷಿಪಣಿ ಮಾನವ ಡಾ.ಎ.ಪಿ.ಜೆ. ಅಬ್ದುಲ್ ಕಲಾಂರಿಗೂ, ಜನಸಾಮಾನ್ಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರಿಗೂ ಏನು ವ್ಯತ್ಯಾಸ?

★ ಈ ಮೂರೂ ಕೆಲಸಗಳಿಗೆ ಬೇಕಾಗಿರುವ ಕುಶಲತೆ ಬೇರೆ ಬೇರೆ. ಒಳ್ಳೆಯ ವ್ಯಕ್ತಿಯಾಗಿರಬೇಕು ಎನ್ನುವುದು ಇವುಗಳೆಲ್ಲದರ ಸಾಮಾನ್ಯ ಸೂತ್ರ.

? ವಿಜ್ಞಾನ ಮತ್ತು ಧರ್ಮಗಳ ನಡುವೆ ಇರುವ ಸಂಬಂಧ ವೇನು?

☆ ವಿಜ್ಞಾನ ಮತ್ತು ಧರ್ಮ—ಇವೆರಡೂ ಸತ್ಯದ ಅನ್ವೇಷಣೆಗಳೇ. ಒಂದಕ್ಕೊಂದು ಪೂರಕವಾಗಿವೆ ಇವು. ದೃಶ್ಯ ಜಗತ್ತಿನೊಂದಿಗೆ ವಿಜ್ಞಾನ ವ್ಯವಹರಿಸುತ್ತದೆ. ಧರ್ಮವು ಆಧ್ಯಾತ್ಮಿಕತೆಗೆ ಸಂಬಂಧಿಸಿದೆ.

? ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವು ನಮ್ಮ ಭಾರತೀಯ ಸಂಸ್ಕೃತಿಯ ಮೇಲೆ ಅಧಿಕತರವಾದ ಪ್ರಭಾವವನ್ನು ಬೀರುತ್ತಿರುವುದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ನಮ್ಮ ಭಾರತೀಯ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಯಾವ ಮಾರ್ಗವನ್ನು ಅನುಸರಿಸಬೇಕು?

☆ ಸ್ವಲ್ಪ ಕಾಲದ ಹಿಂದೆ ನಮ್ಮ ದೇಶದ ಆಧುನಿಕ ಸ್ಥಿತಿಗತಿಯ ಬಗ್ಗೆ ನಾನಿ ಪಾಲ್ಕಿವಾಲಾ ಬರೆದಿರುವ ಪುಸ್ತಕವನ್ನು ಓದುತ್ತಿದ್ದೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿರುವ ನಮ್ಮ ನಗರಗಳಲ್ಲಿನ ಜೀವನಶೈಲಿಯನ್ನು ಆಧುನಿಕ ಜೀವನದ ಮಾದರಿಯೆಂದು ಪರಿಗಣಿಸುತ್ತಿರುವುದರಿಂದ ೫,೦೦೦ ವರ್ಷಗಳಿಂದ ಸಂರಕ್ಷಿಸಿಕೊಂಡು ಬಂದಿರುವ ಭಾರತೀಯ ಸಂಸ್ಕೃತಿಯ ವಿನಯಶೀಲತೆ, ಸಭ್ಯತೆ, ಹಿರಿಯರಿಗೆ ಗೌರವ, ಅತಿಥಿ ಸತ್ಕಾರ, ಪ್ರಾಮಾಣಿಕತೆ, ಶುಚಿತ್ವ, ನೈತಿಕತೆಯಂತಹ ಉತ್ತಮ ಮೌಲ್ಯಗಳನ್ನು ನಾವು ಕಡೆಗಣಿಸುತ್ತಿದ್ದೇವೆ ಎಂದು ಅವರು ಹೇಳುತ್ತಾರೆ.

ತಿರುಚಿರಾಪಳ್ಳಿಯ ಸೆಂಟ್ ಜೋಸೆಫ್ಸ್ ಕಾಲೇಜಿನಲ್ಲಿ ನಾನು ವ್ಯಾಸಂಗ ಮಾಡುತ್ತಿದ್ದಾಗ ಹಿರಿಯ ಪಾದ್ರಿಗಳಾದ ಫಾದರ್ ಕಾಲತಿಲ್ ಅವರು ನೀಡಿದ ಉಪನ್ಯಾಸಗಳು ಈಗಲೂ ನೆನಪಿನಲ್ಲಿವೆ. ಪ್ರತಿ ಸೋಮವಾರ ಒಂದು ಗಂಟೆಯ ಕಾಲ ಅವರು ಪಾಠ ಹೇಳುತ್ತಿದ್ದರು. ಉತ್ತಮ ವ್ಯಕ್ತಿಗಳು, ಅವರು ಏಕೆ ಉತ್ತಮರು, ಹಿಂದೆ ಆಗಿಹೋದ ಮಹಾನ್ ವ್ಯಕ್ತಿಗಳು, ಈಗಿರುವ ಮಹಾನ್ ಚೇತನಗಳ ಕುರಿತು ಫಾದರ್ ಮಾತನಾಡುತ್ತಿದ್ದರು. ಬುದ್ಧ, ಕನ್ಫೂಷಿಯಸ್, ಸಂತ ಆಗಸ್ಟಿನ್, ಖಲೀಫಾ ಓಮರ್, ಮಹಾತ್ಮಾ ಗಾಂಧಿ, ಐನ್‌ಸ್ಟೈನ್, ಅಬ್ರಹಾಂ ಲಿಂಕನ್ ಮುಂತಾದ ಪ್ರಸಿದ್ಧ ವ್ಯಕ್ತಿಗಳ ಜೀವನ ಘಟನೆಗಳೊಂದಿಗೆ ನಮ್ಮ ಸಂಸ್ಕೃತಿಯ ಅನೇಕ ನೀತಿಕಥೆಗಳನ್ನೂ ಹೇಳುತ್ತಿದ್ದರು. ಜನರ ಸೇವೆಯನ್ನು ಮಾಡಿರುವ ಸಮಾಜದ ಹಿತಚಿಂತಕರ ಬಗ್ಗೆಯೂ ಹೇಳುತ್ತಿದ್ದರು. ನಮ್ಮ ಶಾಲಾಕಾಲೇಜುಗಳು ವಾರಕ್ಕೊಮ್ಮೆಯಾದರೂ ಅಕ್ಕಪಕ್ಕದ ಸಂಸ್ಥೆಗಳಿಂದ ಹಿರಿಯ ವ್ಯಕ್ತಿಗಳನ್ನು ಕರೆಯಿಸಿ ಅವರಿಂದ ಮಕ್ಕಳಿಗೆ ಒಳ್ಳೆಯ ವಿಚಾರಗಳನ್ನು ಹೇಳಿಸಬೇಕು. ಇದನ್ನು ಭಾರತೀಯ ಸಂಸ್ಕೃತಿಯ ಬಳುವಳಿಯನ್ನು ತಿಳಿಸಿಕೊಡುವ ತರಗತಿ ಎಂದೇ ಹೆಸರಿಸಬಹುದು. ಅಥವಾ ನೈತಿಕ ಶಿಕ್ಷಣದ ತರಗತಿ ಎಂದೂ ಕರೆಯಬಹುದು. ಈ ರೀತಿಯ ತರಗತಿಗಳಿಂದ ಎಳೆಯ ಮನಸ್ಸುಗಳಲ್ಲಿ ದೇಶಪ್ರೇಮ, ಮಾನವ ಪ್ರೇಮಗಳಂತಹ ಭಾವನೆಗಳು ಬೆಳೆದು ಅವರು ಉತ್ತಮ ವ್ಯಕ್ತಿಗಳಾಗುವುದರಲ್ಲಿ ಸಂದೇಹವಿಲ್ಲ.

? ನೀವು ವಿದ್ಯಾರ್ಥಿಗಳೊಂದಿಗೆ ಹೆಚ್ಚು ಮಾತನಾಡಲು ಬಯಸುತ್ತೀರಿ ಎಂಬುದು ಸರ್ವವಿದಿತವಾದ ವಿಷಯ. ಅದಕ್ಕೆ ಕಾರಣವೇನು?

☆ ವಿದ್ಯಾರ್ಥಿಗಳು ಸೃಜನಶೀಲರು ಮತ್ತು ಅವರ ಮನಸ್ಸು ಪೂರ್ವಾಗ್ರಹಪೀಡಿತವಲ್ಲ. ಈ ಭೂಮಿಯ ಮೇಲೆ ಇರುವ ಅತ್ಯುತ್ತಮ ಸಂಪನ್ಮೂಲವೇ ಎಚ್ಚೆತ್ತ ಯುವ ಚೇತನ. ✪

### ವಸಂತ ವಿಹಾರ – 2006 ಕಾರ್ಯಕ್ರಮದ ವರದಿ

'ವಸಂತ ವಿಹಾರ' ವ್ಯಕ್ತಿತ್ವ ವಿಕಸನದ ಬೇಸಿಗೆ ಶಿಬಿರವನ್ನು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ ಏಪ್ರಿಲ್ 29ರಿಂದ ಮೇ 9, 2006ರವರೆಗೆ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿತ್ತು. ಈ 2006ರ ಶಿಬಿರವು ಆಶ್ರಮ ನಡೆಸುತ್ತಿರುವ 6ನೇ ಬೇಸಿಗೆ ಶಿಬಿರವಾಗಿದ್ದು, ಈ ಶಿಬಿರದ ಮುಖ್ಯ ಉದ್ದೇಶವು ಮೌಲ್ಯಾಧಾರಿತ ಚಟುವಟಿಕೆಗಳಿಂದ ಕೂಡಿರುವ ವ್ಯಕ್ತಿವಿಕಸನ ಕಾರ್ಯಕ್ರಮವಾಗಿತ್ತು. 110 ವಿದ್ಯಾರ್ಥಿಗಳು ನಗರದ ವಿವಿಧ ಪ್ರೌಢಶಾಲೆಗಳಿಂದ ಭಾಗವಹಿಸಿದ್ದರು. ಶಿಬಿರಾರ್ಥಿಗಳಿಗೆಲ್ಲರಿಗೂ ವಿದ್ಯುತ್‌ವಾಣಿ, ಗೀತಾಭಾವಸಂಚಯ, ದಿವ್ಯತ್ರಯರು, ಭಜನೆಗಳು ಎಂಬ ನಾಲ್ಕು ಹೊತ್ತಿಗೆಗಳನ್ನು ಹಾಗೂ ಕಿರು ನೋಟ್‌ಪುಸ್ತಕ ಮತ್ತು ಪೆನ್ನೊಂದನ್ನು ಉಚಿತವಾಗಿ ನೀಡಲಾಯಿತು.

ಹತ್ತು ದಿನಗಳ ಶಿಬಿರದ ಕಾರ್ಯಚಟುವಟಿಕೆಗಳಲ್ಲಿ ಮನಸ್ಸಿಗೆ ತರಬೇತಿ ನೀಡುವ ಯೋಗಾಭ್ಯಾಸ, ದೇವರನಾಮ ಸಂಕೀರ್ತನೆ ಹಾಗೂ ಧ್ಯಾನದ ತರಗತಿಗಳಿದ್ದವು. ಇದಲ್ಲದೆ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತಹ ಮಾಹಿತಿ ನೀಡುವ ವಿಶೇಷ ಪ್ರವಚನಗಳಿದ್ದವು. ಗ್ರಂಥಾಲಯದ ಸೌಲಭ್ಯವನ್ನೂ ನೀಡಲಾಗಿತ್ತು. ವಿದ್ಯಾರ್ಥಿಗಳಿಗೆ ಪ್ರತಿದಿನ ತಿಂಡಿಯನ್ನು ನೀಡಲಾಗುತ್ತಿತ್ತು ಹಾಗೂ ಅವರು ಸೇವಾಭಾವವನ್ನು ರೂಢಿಸಿಕೊಳ್ಳುವ ಸಲುವಾಗಿ ಸಣ್ಣ ಪುಟ್ಟ ಕೆಲಸಗಳನ್ನೂ ಹೇಳಿಕೊಡಲಾಯಿತು. ಅನೇಕ ಚಿತ್ರಗಳನ್ನೂ ತೋರಿಸಿದ್ದರಿಂದ ಶಿಬಿರಾರ್ಥಿಗಳು ಉತ್ಸಾಹದಿಂದ ಎಲ್ಲ ಕಾರ್ಯಕ್ರಮಗಳಲ್ಲೂ ಭಾಗವಹಿಸಿದರು. 'ರಸಪ್ರಶ್ನೆ' ಕಾರ್ಯಕ್ರಮವನ್ನು ಶಿಬಿರಾರ್ಥಿಗಳಿಗೆ ನಡೆಸಿ ವಿಜೇತರಾದವರಿಗೆ ಬಹುಮಾನ ವಿತರಣೆಯಿತ್ತು. ಶಿಬಿರದ ಹತ್ತು ದಿನಗಳೂ ಪೂರ್ಣ ಹಾಜರಾತಿ ಇದ್ದ ಹಾಗೂ ಶೇಕಡಾ ತೊಂಬತ್ತರಷ್ಟು ಹಾಜರಾತಿ ಇದ್ದ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರಗಳ ವಿತರಣೆಯಿತ್ತು. ✪